# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - FRIDAY 21-10-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಪಾಮೆಣ್ಣೆ ದರ ಏರಿಕೆಗೆ ತಡೆ, ಸ್ವಲ್ಪ ಮಟ್ಟಿನ ಇಳಿಕೆ

ಸತತ ಏರಿಕೆಯಲ್ಲಿದ್ದ ಮಲೇಶಿಯನ್ ಪಾಮೆಣ್ಣೆ ದರ ಸ್ವಲ್ಪ ಮಟ್ಟಿನ ಕುಸಿತ ಕಂಡಿದೆ. ಆದರೂ ಜಾಗತಿಕ ಪೂರೈಕೆಯ ಅನಿಶ್ಚಿತತೆಯಿಂದ ಹೆಚ್ಚಿನ ದರ ಇಳಿಕೆ ಕಂಡು ಬಂದಿಲ್ಲ. ಅಕ್ಟೋಬರ್ 1–20ರ ತನಕ ಮಲೇಶಿಯನ್ ಪಾಮೆಣ್ಣೆ ರಫ್ತು 8.4 ಶೇಕಡಾ ಇಳಿಕೆಯಾಗಿದೆಯೆಂದು *** ವರದಿ ಮಾಡಿದೆ. ಇಂದು ಸರ್ವೆಯರ್ ಪರ್ಮಸ್ವೆಕ್ ಅಗ್ರಿ ಪ್ರಕಾರ ರಫ್ತು 3.3 ಶೇಕಡಾ ವೃದ್ಧಿಯಾಗಿದೆ.

## ಜಾಗತಿಕ ಜೋಳ ಉತ್ಪಾದನೆ 2 ಮಿಲಿಯನ್ ಟನ್ ಇಳಿಕೆ – IGC

ಜಾಗತಿಕ ಜೋಳ ಕೌನ್ಸಿಲ್ 2022–23 ಜೋಳ ಉತ್ಪಾದನೆ ಅಂದಾಜು 2 ಮಿಲಿಯನ್ ಟನ್ ಇಳಿಕೆ ಮಾಡಿ 1.166 ಬಿಲಿಯನ್ ಟನ್‌ಗಳಾಗಬಹುದೆಂದು ಅಂದಾಜಿಸಿದೆ. ಇದು ಹಿಂದಿನ ಸೀಸನ್‌ನ ಜಾಗತಿಕ ಜೋಳ ಉತ್ಪಾದನೆಯಾದ 1.217 ಬಿಲಿಯನ್ ಟನ್‌ಗಳಿಗಿಂತ ಗಣನೀಯ ಇಳಿಕೆಯಾಗಿದೆ. ಯುರೋಪಿನ ಉತ್ಪಾದನೆ 56.2 ಮಿಲಿಯನ್ ಟನ್‌ಗಳಿಂದ ಇಳಿಕೆ ಹೊಂದಿ 535 ಮಿಲಿಯನ್ ಟನ್‌ಗಳಾಗಲಿದೆ. ** ನ ಉತ್ಪಾದನೆ 353 ರಿಂದ 354 ಮಿಲಿಯನ್ ಟನ್‌ಗಳಾಗಬಹುದೆನ್ನಲಾಗಿದೆ. ಯು.ಎಸ್ 54.6 ಮಿಲಿಯನ್ ಟನ್ ಜೋಳ ರಫ್ತು ಮಾಡಬಹುದೆಂದು ನಿರೀಕ್ಷಿಸಿದ್ದು ಹಿಂದಿನ ವರ್ಷ ರಫ್ತು 57.8 ಮಿಲಿಯನ್ ಟನ್‌ಗಳು.

## ಬ್ರೆಜಿಲ್‌ನಲ್ಲಿ ದಾಖಲೆ ಸೋಯಾಬೀನ್ ಉತ್ಪಾದನೆ

2022–23 ರಲ್ಲಿ ಬ್ರೆಜಿಲ್‌ನಲ್ಲಿ ದಾಖಲೆ ಸೋಯಾಬೀನ್ ಉತ್ಪಾದನೆಯಾಗಲಿದೆಯೆನ್ನಲಾಗಿದೆಯೆಂದು ವಿವಿಧ ಮೂಲದ ಅಂದಾಜುಗಳು ಹೇಳುತ್ತಿವೆ. ಚೀನಾದ ಪ್ರಬಲ ಬೇಡಿಕೆ ಚಿಕಾಗೋ ಮಾರುಕಟ್ಟೆ ದರಕ್ಕೆ ಬೆಂಬಲ ನೀಡುತ್ತಿದೆ. ಅಮೇರಿಕಾದ ಉತ್ಪಾದನೆ ಅಂದಾಜಿಗಿಂತ ಕಡಿಮೆಯಾಗಲಿದೆಯೆನ್ನಲಾಗಿದೆ.

## ಗೋಡಂಬಿ ತಿರುಳು ದರ ಇಳಿಕೆ

ದೀಪಾವಳಿ ಹಬ್ಬದ ಹೆಚ್ಚುವರಿ ಬೇಡಿಕೆ ಈಗಾಗಲೇ ಕೊನೆಗೊಂಡಿದ್ದು ಈ ಬಾರಿ ಬೇಡಿಕೆ ಬಹಳ ಹೆಚ್ಚಳವಾಗುವಲ್ಲಿ ವಿಫಲವಾಗಿದೆ. ಈ ಬಾರಿ ಭಾರತದಲ್ಲಿ ಗೋಡಂಬಿ ಬದಲಿಗೆ ಇತರ ಒಣ ಹಣ್ಣುಗಳಿಗೆ (DRY FRUITS) ಬೇಡಿಕೆ ಹೆಚ್ಚಳವಾಗುತ್ತಿದೆ. ಇದರಿಂದ ಈ ಬಾರಿ ಗೋಡಂಬಿ ತಿರುಳಿನ ದರ ಗಣನೀಯ ಹೆಚ್ಚಳ ಕಾಣಲಿಲ್ಲ. ಅಲ್ಪ ಮಟ್ಟಿನ ದರ ಹೆಚ್ಚಳವಾಗಿತ್ತು. ಜಾಗತಿಕ ಆರ್ಥಿಕ ಹಿಂಜರಿತದಿಂದ ರಫ್ತು ಬೇಡಿಕೆಯೂ ಈವರೆಗೆ ಗಣನೀಯ ಏರಿಕೆಯಾಗಿಲ್ಲ. ಇದರೊಂದಿಗೆ ಇತರ ದೇಶಗಳಿಂದಲೂ ವಿದೇಶಗಳಿಗೆ ಪೂರೈಕೆಯಾಗುತ್ತಿದೆ. ಗೋಡಂಬಿ ತಿರುಳು ದರ ಇತ್ತೀಚೆಗೆ 10–15 ಶೇಕಡಾ ಇಳಿಕೆ ಕಂಡಿದೆಯೆನ್ನಲಾಗಿದೆ. ಮುಂದೆ ಚಳಿಗಾಲದ ಚಳಿ ಉತ್ತರಭಾರತದಲ್ಲಿ ಜೋರಾಗಿದ್ದರೆ ಅಲ್ಲಿಂದ ಬೇಡಿಕೆ ಬರಲೂ ಬಹುದು. ಆಹಾರೋದ್ಯಮ ಹೋಟೆಲ್ ವಲಯಗಳಿಂದ ಗೋಡಂಬಿ ತಿರುಳು ಕಡಿ ಎಂದಿನಂತೆ ಬೇಡಿಕೆಯಿರುವ ಸಾಧ್ಯತೆಗಳಿವೆ.